ಶ್ರೀ ಬಿ.ಎಸ್. ಯಡಿಯೂರಪ್ಪ :– ಮಾನ್ಯ ಅಧ್ಯಕ್ಷರೇ ಗ್ರಾಮಲೆಕ್ಕಿಗರ ಬಗ್ಗೆ ಸನ್ಮಾನ್ಯ ಹಿಂದಿನ ಕಂದಾಯ ಸಚಿವರು ಒಂದು ಮಾತು ಹೇಳಿದ್ದರು. ಏನೆಂದರೆ ಯಾವ ಗ್ರಾಮಲೆಕ್ಕಿಗರು ಅವರು ತಮ್ಮ ಕೆಲಸದ ಸ್ಥಾನಗಳಲ್ಲಿ ಅಂದರೆ ಕೇಂದ್ರ ಸ್ಥಾನಗಳಲ್ಲಿ ಇರುವುದಿಲ್ಲವೋ ಅಂತಹವರ ಮೇಲೆ ಕ್ರಮ ತೆಗೆದುಕೊಂಡು, ಅವರನ್ನು ಮನೆಗೆ ಕಳುಹಿಸುತ್ತೇನೆಂದು ಘೋಷಣೆ ಮಾಡಿದರು. ಆದರೆ ಮಾನ್ಯ ಸಚಿವರು ಮನೆಗಳು ಅಲ್ಲಿ ಇಲ್ಲದೆ ಇದ್ದರೆ ಬೇರೆ ಕಡೆ ಇರಬಹುದು ಎನ್ನುವ ಅಭಿಪ್ರಾಯ ಬರುವ ರೀತಿಯಲ್ಲಿ ಹೇಳಿದರು. ಆದರೆ ಅವರು ಹಳ್ಳಿಗಳಲ್ಲಿ ವಾಸ ಮಾಡಿದರೆ ಅವರಿಗೆ ಬೇಕಾದ ಅನುಕೂಲ ಮಾಡಿಕೊಡುವುದಕ್ಕೆ ನಾವು ಹಳ್ಳಿಯ ಜನ ತಯಾರಿದ್ದಾರೆ. ನಾವು ಅವರಿಗೆ ಮನೆ ಕಟ್ಟಿಸಿ ಕೊಡತಕ್ಕಂಥಾದ್ದಕ್ಕೆ ಆಗುವುದಿಲ್ಲ; ಆದ್ದರಿಂದ ಅವರು ಅಲ್ಲೇ ವಾಸ ಮಾಡುವಂತಹ ಕ್ರಮ ತೆಗೆದುಕೊಳ್ಳುತ್ತೀರಾ?

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ :– ಮಾನ್ಯ ಅಧ್ಯಕ್ಷರೇ ನಾನು ಈಗಾಗಲೇ ಹೇಳಿದ್ದೇನೆ. ಯಾವ ಗ್ರಾಮಲೆಕ್ಕಿಗ ಆ ಊರಿನಲ್ಲಿ ಇರುವುದಿಲ್ಲವೋ, ಅಂದರೆ ಅವನನ್ನು ಎಲ್ಲಿ ಪೋಸ್ಟಿಂಗ್ಸ್ ಮಾಡುತ್ತೇವೆಯೋ, ಅಲ್ಲಿ ವಾಸ ಇರದಿದ್ದರೆ, ಅವರ ಮೇಲೆ ಕ್ರಮ ತೆಗೆದುಕೊಳ್ಳುತ್ತೇವೆಂದು ಸ್ಪಷ್ಟವಾಗಿ ಹೇಳಿದೆ. ನಾವು ಅವರಿಗೆ ಬೆಂಬಲ ನೀಡತಕ್ಕಂಥಾದ್ದು ಆಗಲಿ ಅಥವಾ ಅವರಿಗೆ ಸಹಾಯ ಮಾಡತಕ್ಕಂಥ ಪ್ರಶ್ನೆಯೇ ಇಲ್ಲ. ಕೆಲವು ಕಡೆ ವೀಕರ್ ಸೆಕ್ಷನ್‌ಗೆ ಸೇರಿದ ವಿಲೇಜ್ ಆಕೌಂಟೆಂಟ್ಸ್‌ಗೆ ವಾಸ ಮಾಡಲು ಮನೆ ಸಿಗುವುದಿಲ್ಲ. ಆಗ ಅವರು ನಾವೇನು ಮಾಡೋಣ ಸಾರ್ ಅಲ್ಲಿ ವಾಸ ಮಾಡಲು ಮನೆ ಸಿಗುವುದಿಲ್ಲ ಎಂದು ಹೇಳುತ್ತಾರೆ.

ಶ್ರೀ ಸಿ. ಬೈರೇಗೌಡ :– ಮನೆ ಇರುವ ಕಡೆ ಹಾಕಿ.

ಶ್ರೀ ಬಿ.ಎಸ್. ಯಡಿಯೂರಪ್ಪ :– ಶಾಸಕರು ಜವಾಬ್ದಾರಿ ತೆಗೆದುಕೊಳ್ಳುತ್ತೇವೆ. ಎಲ್ಲಿ ಯಾರಿಗೆ ಮನೆ ಸಿಗುವುದಿಲ್ಲ ಎಂದು ಹೇಳಿ.

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ :– ನಾನು ತಮಗೆ ಒಂದು ಉದಾಹರಣೆ ಹೇಳುತ್ತೇನೆ. ನಾನು ಎಜುಕೇಷನ್ ಮಿನಿಸ್ಟರ್ ಆಗಿದ್ದೆ. ಶಹಪುರ ತಾಲ್ಲೂಕು ಮಾನ್ಯ ಶಿವಶೇಕರಪ್ಪಗೌಡರ ಕ್ಷೇತ್ರ. ಒಬ್ಬ ಟೀಚರ್‌ಗೆ ಅಲ್ಲಿಗೆ ಪೋಸ್ಟ್ ಮಾಡಿದೆವು. ಅಲ್ಲಿ ಶಾಲೆ ಹನುಮ ದೇವಸ್ಥಾನದ ಗುಡಿಯಲ್ಲಿ ನಡೆಯುತ್ತಿತ್ತು. ಅಲ್ಲಿನ ಬೆಟರ್‌ಮೆಂಟ್ ಕಮಿಟಿಯವರು ಒಂದು ರೆಜುಲೂಶನ್ ಪಾಸ್ ಮಾಡಿ ಕಳುಹಿಸಿದರು. ನಮಗೆ ಎಸ್.ಸಿ. ಟೀಚರ್‌ನ್ನು ಪೋಸ್ಟ್ ಮಾಡಿದ್ದೀರಿ, ಅವರು ನಮಗೆ ಬೇಕಿಲ್ಲ ಎಂದು. ನಮ್ಮ ಶಾಲೆ ದೇವರ ಗುಡಿಯಲ್ಲಿ ನಡೆಯುತ್ತಿದೆ, ಆದ್ದರಿಂದ ಎಸ್.ಸಿ.ಯವರನ್ನು ಹಾಕಬೇಡಿ ಎಂದು ಹೇಳಿದರು. ಆಗ ಅವನು ಎಲ್ಲಿ ಇರಬೇಕು ಕೊನೆಗೆ ಆತ ನನ್ನ ಹತ್ತಿರ ಬಂದ, ನಾನು ಹೇಳಿದೆ ನೀನು ಸರ್ಕಾರದ ಬಿಲ್ಡಿಂಗ್ ಎಲ್ಲಿ ಇದೆ, ಅಂತಹ ಕಡೆ ಹಾಕಿಕೊಡುತ್ತೇನೆ ಅಲ್ಲಿ ಹೋಗು ಎಂದು ಹೇಳಿದೆ. ನಾನು ಒಂದು ಉದಾಹರಣೆ ಕೊಟ್ಟೆ ಅಷ್ಟೇ. ಕೆಲವು ಕಡೆ ಆಗುತ್ತದೆ, ಇಂಥಾದ್ದು ಒಂದು ಪರ್ಸೆಂಟ್ ಇಂತಹದ್ದು ಇರಬಹುದು ಅಥವಾ ಇಲ್ಲದೆ ಇರಬಹುದು, ಆದರೆ ಹಳ್ಳಿಗಳಲ್ಲಿ ವಿಲೇಜ್ ಆಕೌಂಟೆಂಟ್ ಮನೆಗಳು ಇದ್ದೂ ಕೂಡ ಅಲ್ಲಿ ವಾಸ ಮಾಡದೆ ಇದ್ದರೆ ಹಾಗೂ ಈ ಬಗ್ಗೆ ದೂರುಗಳು ಬಂದರೆ, ಅಂತಹವರ ಮೇಲೆ ಖಂಡಿತವಾಗಿ ಕ್ರಮ ತೆಗೆದುಕೊಂಡು ಅವರನ್ನು ಸಸ್‌ಪೆಂಡ್ ಮಾಡಿ ಮನೆಗೆ ಕಳುಹಿಸುತ್ತೇನೆ.

ಪ್ರಶ್ನೆ 514 (ಮಾನ್ಯ ಸದಸ್ಯರು ಹಾಜರಿರಲಿಲ್ಲ).

ರಾಷ್ಟ್ರೀಯ ಹೆದ್ದಾರಿ ಸಂಖ್ಯೆ

630 ಶ್ರೀ ಎಸ್. ಶಫಿ ಅಹಮದ್ (ತುಮಕೂರು) :– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೆ.

ಬಿ.ಹೆಚ್. ರಸ್ತೆ ಮತ್ತು ರಾಷ್ಟ್ರೀಯ ಹೆದ್ದಾರಿ 4ರ ಮಧ್ಯದಲ್ಲಿರುವ ಸಾರ್ವಜನಿಕ ಉಪಯೋಗಕ್ಕಾಗಿ ಕಾಯ್ದಿರಿಸಿದ ಜಮೀನನ್ನು ಉದ್ದೇಶಿತ ಭೂ ಸ್ವಾಧೀನ ನಡವಳಿಕೆಯಿಂದ ಕೈಬಿಡಲು ಕಾರಣಗಳೇನು;

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಮಂತ್ರಿಯವರು);

ಬಿ.ಹೆಚ್. ರಸ್ತೆ ಮತ್ತು ರಾಷ್ಟ್ರೀಯ ಹೆದ್ದಾರಿ 4ರ ಮಧ್ಯಬರುವ ಜಮೀನನ್ನು ಭೂ ಸ್ವಾಧೀನಪಡಿಸಲು ರಾಷ್ಟ್ರೀಯ ಹೆದ್ದಾರಿ ಇಲಾಖೆಯಿಂದ ಯಾವುದೇ ಪ್ರಸ್ತಾವನೆ ಇರುವುದಿಲ್ಲ. ಆದ್ದರಿಂದ ಭೂ ಸ್ವಾಧೀನ ನಡವಳಿ ಕೈಬಿಡುವ ಪ್ರಶ್ನೆ ಉದ್ಭವಿಸುವುದಿಲ್ಲ.

ಶ್ರೀ ಶಫಿ ಅಹಮದ್ :– ಮಾನ್ಯ ಅಧ್ಯಕ್ಷರೇ, ನಾನು ಕೇಳಿದ ಪ್ರಶ್ನೆಗೆ ಆ ಪ್ರೊಸೀಡಿಂಗ್ಸ್ ಡ್ರಾಪ್ ಮಾಡಲಾಗಿದೆ ಎಂದು ನನಗೆ ಉತ್ತರ ಕೊಟ್ಟಿದ್ದಾರೆ. ತುಮಕೂರು ನಗರದಲ್ಲಿ 1981–82ರಲ್ಲಿ ಯುನಿಸೆಫ್ ಸ್ಕೀಮಿನಲ್ಲಿ ಅಕ್ವಿಜಿಷನ್ ಪ್ರೊಸಿಡಿಂಗ್ಸ್ ಮಾಡಿದ್ದರು. ಬಹುಶಃ ಅದು ಬಹಳ ಬೆಲೆ ಬಾಳತಕ್ಕಂಥ ಜಾಗ. ಆದ್ದರಿಂದ ಆಗಿನ ಅಕ್ವಿಜಿಷನ್ ಪ್ರೊಸಿಡಿಂಗ್ಸನ್ನು ಮುಂದುವರಿಸುತ್ತೀರಾ ಎಂದು ಕೇಳುತ್ತೇನೆ?

ಶ್ರೀ ಮಲ್ಲಿಕಾರ್ಜುನ ಎಂ. ಖರ್ಗೆ :– ಮಾನ್ಯ ಅಧ್ಯಕ್ಷರೇ ಅವರು ಪ್ರಶ್ನೆ ಕೇಳಿರುವುದು ಸ್ವಲ್ಪ ವೇಗ್ ಆಗಿದೆ. "The reasons for dropping the proposed acquisition proceedings of the lands located between B.H. Road and N.H.-4 which is reserved for public utility" ಎಂದು ಕೇಳಿದ್ದಾರೆ. ಅದು ಯಾವ ಸರ್ವೆ ನಂಬರ್, ಎಲ್ಲಿ ಏನು ಎಂದು ಇದರಲ್ಲಿ ಇಲ್ಲ. ಕನಿಷ್ಟಪಕ್ಷ ಸರ್ವೇ ನಂಬರ್ ಆದರೂ ತಾವು ತಿಳಿಸಿದರೆ ನಾನು ಸಂಬಂಧಪಟ್ಟ ಅಸಿಸ್ಟೆಂಟ್ ಕಮಿಷನರ್‌ರವರಿಗೆ ತಿಳಿಸಿ ಈ ಲ್ಯಾಂಡ್ ಅಕ್ವಿಜಿಷನ್ ಏಕೆ ಡ್ರಾಪ್ ಮಾಡಿದ್ದೀರೆಂದು ಕೇಳಬಹುದು, ತಾವು ಎನ್.ಹೆಚ್. 4 ಮತ್ತು ಬಿ.ಹೆಚ್. ರಸ್ತೆ ಅಂದರೆ ಅದು ಬಹಳ ಉದ್ದ ಇದೆ; ಲೊಕೇಷನ್ ಎಲ್ಲಿ ಸರ್ವೆ ನಂಬರ್ ಯಾವುದು ಮತ್ತು ಎಷ್ಟು ಎಕರೆ ಪ್ರಪೋಸ್ ಮಾಡಿದ್ದಾರೆಂದು ಹೇಳಿದರೆ ನಾನು ತಮಗೆ ಪೂರ್ಣ ಮಾಹಿತಿಯನ್ನು ಒದಗಿಸುತ್ತೇನೆ.

ಶ್ರೀ ಶಫಿ ಅಹಮದ್ :– ನಾನು ಸರ್ವೇ ನಂಬರ್‌ಗಳನ್ನು ಕಳುಹಿಸಿಕೊಡುತ್ತೇನೆ. ದಯಮಾಡಿ ಆ ಲ್ಯಾಂಡ್ ಅಕ್ವೆಸಿಷನ್ ಮಾಡಬೇಕೆಂದು ಕೇಳಿಕೊಳ್ಳುತ್ತೇನೆ.

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ :– ಮೊದಲು ಕಳುಹಿಸಿಕೊಡಿ, ನೋಡುತ್ತೇನೆ

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಮೇಲು ಕೋಟೆಯ ಶ್ರೀ ಚೆಲುವನಾರಾಯಣ ಸ್ವಾಮಿ ದೇವಸ್ಥಾನದ ಬಗ್ಗೆ

514. ಶ್ರೀ ಡಿ. ಹಲಗೇಗೌಡ (ಪಾಂಡವಪುರ) :– ಮಾನ್ಯ ಕಂದಾಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ತಿಳಿಸುವರೆ?

ಅ) ಪಾಂಡವಪುರ ತಾಲ್ಲೂಕಿನಲ್ಲಿರುವ ಮೇಲುಕೋಟೆಯ ಶ್ರೀ ಚೆಲುವನಾರಾಯಣಸ್ವಾಮಿ ದೇವಾಲಯವು ಮುಜರಾಯಿ ಇಲಾಖೆಗೆ ಸೇರಿದೆಯೆ?

ಆ) ಸೇರಿದ್ದಲ್ಲಿ ಕಳೆದ 3 ವರ್ಷಗಳಿಂದ ಈ ದೇವಾಲಯಕ್ಕೆ ಬಿಡುಗಡೆ ಮಾಡಿರುವ ಹಣದ ಮೊತ್ತವೆಷ್ಟು?

ಇ) ಈ ಹಣವನ್ನು ಯಾವ ಯಾವ ಕೆಲಸಗಳಿಗಾಗಿ ವಿನಿಯೋಗಿಸಲಾಗಿದೆ? (ವರ್ಷವಾರು ವಿವರಗಳನ್ನು ನೀಡುವುದು)

ಈ) ಈ ದೇವಸ್ಥಾನದಲ್ಲಿ ಯಾವುದೇ ಅಭಿವೃದ್ಧಿ ಕೆಲಸಗಳನ್ನು ಮಾಡಿಲ್ಲದಿರುವುದರಿಂದ ಈ ದೇವಸ್ಥಾನವು ದಿನೇ ದಿನೇ ಶಿಥಿಲಗೊಳ್ಳುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ?

ಉ) ಬಂದಿದ್ದಲ್ಲಿ ಸರ್ಕಾರವು ಈ ಬಗ್ಗೆ ಸೂಕ್ತ ಕ್ರಮ ಕೈಗೊಳ್ಳುವುದೇ?

ಶ್ರೀ ಎಂ. ಮಲ್ಲಿಕಾರ್ಜುನ ಖರ್ಗೆ (ಕಂದಾಯ ಸಚಿವರು) .–

ಅ) ಹೌದು